ಕರ್ನಾಟಕ ಸರ್ಕಾರ

ತಹಶೀಲ್ದಾರರು, ಸಿರುಗುಪ್ಪ ಇವರ ನ್ಯಾಯಾಲಯ, ಸಿರುಗುಪ್ಪ.

ಸಂ.ಕಂ/ಹಬ/ವಿವಾದ/169/2014–15 ದಿ:01–08–2016

| ವಾದಿಗಳು | ವಿರುದ್ದ | ಪ್ರತಿವಾದಿಗಳು |
|---|---|---|
| 1.ಈರಮ್ಮ ಗಂಡ ಹೇಮಣ್ಣ<br>ಸಂತೆಕೂಡ್ಲೂರು ಗ್ರಾಮ.<br>2.ನರಸಮ್ಮ ಗಂಡ ಯಂಕಪ್ಪ<br>ಬೂದುಗುಪ್ಪ ಗ್ರಾಮ. | | ಶಂಕ್ರಪ್ಪ ತಂದೆ ಯಂಕಪ್ಪ (ಪೋತಿ)<br>ವಾರಸು ಪತ್ನಿ., ಸಾವಿತ್ರಮ್ಮ.<br>ಗಾಂಧೀ ಗ್ರಾಮ. ಮೈಲಾಪುರ<br>ಸಿರುಗುಪ್ಪ ತಾ: |

ದಾವಾ ಜಮೀನಿನ ವಿವರ

| ತಾಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ | ತರಹೆ |
|---|---|---|---|---|
| ಸಿರುಗುಪ್ಪ | ಬೂದುಗುಪ್ಪ | 39/ಬಿ/3 | 1–00 | ಖುಷ್ಕಿ |

ಪೀಠಿಕೆ;–

ಸಿರುಗುಪ್ಪ ತಾಲೂಕು ಬೂದುಗುಪ್ಪ ಗ್ರಾಮದ ಸ,ನಂ. 39/ಬಿ/3 ವಿ:1–00 ಎಕ್ರೆ ಜಮೀನು ಹಾಲಿ ಪಹಣಿ ಪ್ರಕಾರ ನರಸಮ್ಮ ಗಂಡ ಯಂಕಪ್ಪ ಇವರ ಹೆಸರಿಗೆ ಪಹಣಿ ದಾಖಲೆ ಇದ್ದು, ನೋಂದಣಿ ಸಂಖ್ಯೆ:6286/2012–13 ದಿ:01–01–2013 ರ ಪ್ರಕಾರ ಈರಮ್ಮ ಗಂಡ ವೆಮನ್ನ ಇವರಿಗೆ ದಾನಪತ್ರ ನೋಂದಣಿ ಮಾಡಿಸಿಕೊಟ್ಟಿರುತ್ತಾರೆ. ಅದರಂತೆ ದಾನ ಪಡೆದವರ ಹೆಸರಿಗೆ ಹಕ್ಕುಬದಲಾವಣೆ ಮಾಡಲು, ತಾಲೂಕು ಕಛೇರಿ ಭೂಮಿ ಗಣಕೀಕರಣ ಶಾಖೆಯಿಂದ ಕಂದಾಯ ನಿರೀಕ್ಷಕರು ಕರೂರು ಇವರಿಗೆ ಚೆಕ್‌ಲಿಸ್ಟ್‌ನ್ನು ಕಳುಹಿಸಲಾಗಿ ಕರ್ನಾಟಕ ಭೂ–ಕಂದಾಯ ನಿಯಮಗಳು 1966 ರ ನಿಯಮ 65 ರಂತೆ ನಮೂನೆ 21 ರ ನೋಟೀಸನ್ನು ಗ್ರಾ,ಲೆ. ಬೂದುಗುಪ್ಪ ಇವರು ಗ್ರಾಮದಲ್ಲಿ ಪ್ರಚುರಪಡಿಸಿರುತ್ತಾರೆ. ಸದ್ರಿ ಪ್ರಕರಣದಲ್ಲಿ ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ ನಿಗದಿತ ಅವಧಿಗೆ ಮುಂಚೆ ಶಂಕ್ರಪ್ಪ ತಂದೆ ಯಂಕಪ್ಪ ಇವರು ಹಕ್ಕು ಬದಲಾವಣೆ ಮಾಡಬಾರದೆಂದು ದಿ:12–06–2014 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು ಕರೂರು ಇವರು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಹ,ಬ.ಸಂಖ್ಯೆ:63/2013–14 (ವಹಿವಾಟು ಸಂಖ್ಯೆ:261/13–14) ಪ್ರಕಾರ ಈ ನ್ಯಾಯಾಲಯಕ್ಕೆ ಕಡತವನ್ನು ಸಲ್ಲಿಸಿರುತ್ತಾರೆ.

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ನೋಂದಾಯಿಸಿಕೊಂಡು ಕರ್ನಾಟಕ ಭೂ–ಕಂದಾಯ ನಿಯಮಗಳು 1966 ರ ನಿಯಮ 67 ಮತ್ತು 43 ರಂತೆ ಪ್ರಕರಣದಲ್ಲಿನ ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸುಗಳನ್ನು ಜಾರಿ ಮಾಡಿ ಪ್ರಕರಣದ ವಿಚಾರಣೆಯನ್ನು ದಿ:21–08–2015 ರಿಂದ 05–10–2015 ರ ವರೆಗೆ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ವಾದಿಗಳು ಹಾಜರು, ಪ್ರತಿವಾದಿ ಶಂಕ್ರಪ್ಪ ಇವರು ದಿ:14–07–2014 ರಂದು ಮರಣ ಹೊಂದಿರುತ್ತಾರೆಂದು, ಪತ್ನಿಯಾದ ಸಾವಿತ್ರಮ್ಮ ಇವರು ವಿಚಾರಣೆಗೆ ಹಾಜರಾಗಿರುತ್ತಾರೆ.

ಸದ್ರಿ ಪ್ರಕರಣದ ಬೂದುಗುಪ್ಪ ಗ್ರಾಮದ ಸ,ನಂ.39/ಬಿ/3 ವಿ:1-00 ಎಕ್ರೆ ಜಮೀನಿಗೆ ಸಂಬಂಧಿಸಿ, ಈಗಾಗಲೇ ನೋಂದಣಿ ಸಂಖ್ಯೆ:6286/2012-13 ದಿ:01-01-2013 ರ ಮೇರೆಗೆ ವಹಿವಾಟು ಸಂಖ್ಯೆ:115/13-14 (ಎಂ.ನಂ:24/2013-14) ರ ಪ್ರಕಾರ ದಾನ ಪಡೆದವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು, ಮತ್ತು ಪ್ರತಿವಾದಿಗೆ ಸಿವಿಲ್ ನ್ಯಾಯಾಲಯ ಮೊರೆಹೋಗಿ ಪರಿಹಾರ ಕಂಡುಕೊಳ್ಳುವಂತೆ ತಿಳಿಸಿ, ಪ್ರಕರಣ ಸಂಖ್ಯೆ:175/2014-15 ರಲ್ಲಿ ಆದೇಶ ಮಾಡಿದ್ದು, ವಹಿವಾಟನ್ನು ಮುಕ್ತಾಯಗೊಳಿಸಲು ಈ ಕೆಳಕಂಡ ಆದೇಶ-

**ಸಂ.ಕಂ/ಹಬ/ವಿವಾದ/169/2014-15** **ದಿ:01-08-2016**

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆ, ವಾಸ್ತವಾಂಶ ಹಾಗೂ ದಾಖಲೆಗಳನ್ವಯ ಸಿರುಗುಪ್ಪ ತಾಲೂಕು ಬೂದುಗುಪ್ಪ ಗ್ರಾಮದ ಸ,ನಂ.39/ಬಿ/3 ವಿ:1-00 ಎಕ್ರೆ ಜಮೀನು ಹಾಲಿ ಪಹಣಿ ಪ್ರಕಾರ ನರಸಮ್ಮ ಗಂಡ ಯಂಕಪ್ಪ ಇವರ ಹೆಸರಿಗೆ ಪಹಣಿ ದಾಖಲೆ ಇದ್ದು, ಈಗಾಗಲೇ ನೋಂದಣಿ ಸಂಖ್ಯೆ:6286/2012-13 ದಿ:01-01-2013 ರ ಮೇರೆಗೆ ವಹಿವಾಟು ಸಂಖ್ಯೆ:115/13-14 (ಎಂ.ನಂ:24/2013-14) ರ ಪ್ರಕಾರ ದಾನ ಪಡೆದವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು, ಮತ್ತು ಪ್ರತಿವಾದಿಗೆ ಸಿವಿಲ್ ನ್ಯಾಯಾಲಯ ಮೊರೆಹೋಗಿ ಪರಿಹಾರ ಕಂಡುಕೊಳ್ಳುವಂತೆ ತಿಳಿಸಿ, ಪ್ರಕರಣ ಸಂಖ್ಯೆ:175/2014-15 ರಲ್ಲಿ ಆದೇಶ ಮಾಡಿದ್ದು, ಸದ್ರಿ ವಹಿವಾಟು ಸಂಖ್ಯೆ:261/13-14 ನ್ನು ಮುಕ್ತಾಯಗೊಳಿಸಲು ಆದೇಶಿಸಿದೆ.

ಈ ಆದೇಶ ಹೇಳಿ ಬರೆಯಿಸಿ, ಬೆರಳಚ್ಚು ಮಾಡಿ, ತಪ್ಪುಗಳನ್ನು ತಿದ್ದಿ ದಿ:01-08-2016 ರಂದು ತೆರೆದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಿದೆ.

ತಹಶೀಲ್ದಾರರು,ಸಿರುಗುಪ್ಪ

ಕರ್ನಾಟಕ ಸರ್ಕಾರ
ಸಿರುಗುಪ್ಪ
ತಹಶೀಲ್ದಾರರ ನ್ಯಾಯಾಲಯ

ಗೆ,

1.ಭೂಮಿ ಗಣಕೀಕರಣ ಶಾಖೆಗೆ ಸೂಕ್ತ ಕ್ರಮಕ್ಕಾಗಿ
2.ವಾದಿ-ಪ್ರತಿವಾದಿಗಳಿಗೆ
3.ಕಛೇರಿ ಕಡತಕ್ಕೆ